1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು

ಸಿಸಿ ನಂಃ
3599/2012
ಪ್ರಾಸಾ. 2 ಚಾಸಾ. 2

ಸಾಕ್ಷಿದಾರರ ಹೆಸರು ಃ ಎಂ ರಂಗಸ್ವಾಮಯ್ಯ
ತಂದೆಯ ಹೆಸರು ಃ ಲೇಟ್ ಮುನಿರಂಗಯ್ಯ
ವಯಸ್ಸು ಃ 60ವರ್ಷ
ಉದ್ಯೋಗ ಃ ಏನೂಇಲ್ಲ
ವಾಸ ಃ ಬೆಂಗಳೂರು

ಸಾಕ್ಷಿಯನ್ನು ಕರೆಸಿ ದಿಃ 19.06.2016 ರಂದು ಪ್ರಮಾಣ ಮಾಡಿಸಲಾಯಿತು.
ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿಯು ಸ್ಥಳ ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಈಗ ನಿಪಿ-2 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2ಎಎಂದು ಗುರುತಿಸಲಾಯಿತು.ಈಗ್ಗೆ 7-8 ವರ್ಷಗಳ ಹಿಂದೆ ನಾನುಹಾಗೂನನ್ನ ಹೆಂಡತಿ ಜಗಳವಾಡಿಕೊಂಡು ಮಹಾಲಕ್ಷ್ಮೀಲೇಔಟ್ ಪೋಲೀಸ್ ಠಾಣೆಗೆ ಹೋದಾಗ ಪೋಲೀಸರು ನಿಪಿ-2ರ ಮೇಲೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಆದರೆ, ಯಾವ ವಿಚಾರಕ್ಕೆಂದು ನನಗೆ ಗೊತ್ತಿರುವುದಿಲ್ಲ.

( ಈ ಹಂತದಲ್ಲಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಾಕ್ಷಿಯ ಪಾಟೀಸವಾಲು ಮಾಡಲು ಅನುಮತಿ ನೀಡಬೇಕೆಂದು ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾರ್ಥಿಸಿಕೊಂಡಿದ್ದು ಅನುಮತಿ ನೀಡಲಾಯಿತು. )

ಪಾಟೀಸವಾಲುಃ ಮಾನ್ಯ ಹಿರಿಯ ಸ.ಸ.ಅ ರವರಿಂದ ಃ

ಪ್ರೆಸಿಡೆನ್ಸಿ ಗ್ರೂಪ್ ಎಂಬ ಸಂಸ್ಥೆಯು ಬೆಂಗಳೂರಿನ ಸುತ್ತಮುತ್ತಲು ಹಾಗೂ ಕರ್ನಾಟಕದ ವಿವಿಧ ಸ್ಥಳಗಳಲ್ಲಿಬೇರೆ ಬೇರೆ ಹೆಸರಿನಲ್ಲಿ ನಿವೇಶನ ಬಡಾವಣೆಗಳನ್ನು ನಿರ್ಮಿಸಿ ಅಭಿವೃದ್ದಿ ಪಡಿಸಿ ಸಾರ್ವಜನಿಕರಿಗೆ ಮಾರಾಟಮಾಡುವುದಾಗಿ ಹೇಳಿ ಸಾರ್ವಜನಿಕರಿಂದ ಹಣವನ್ನು ಪಡೆದು, ಹಣವನ್ನಾಗಲೀ ಅಥವಾನಿವೇಶನವನ್ನು ಕೊಡದ ಕಾರಣ ಪೋಲೀಸರು ನಿಪಿ-2 ರಂತೆ ಸದರಿ ಸಂಸ್ಥೆಯ ಕಚೇರಿಯಲ್ಲಿ ಮಾಡಿರುವ ಸ್ಥಳಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆಂದರೆಸರಿಯಲ್ಲ. ನಿಪಿ-2ರಲ್ಲಿರುವ ವಿಚಾರಗಳು ನನಗೆ ಗೊತ್ತಿದ್ದರೂ ನಿಜಾಂಶವನ್ನು ನಾನು ಹೇಳುತ್ತಿಲ್ಲವೆಂದರೆಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ಮಾನ್ಯ ವಕೀಲರಿಂದಃ

( ಆರೋಪಿತರ ಪರ ಮಾನ್ಯ ವಕೀಲರು ಸಾಕ್ಷಿಯಪಾಟೀಸವಾಲು ಇಲ್ಲವೆಂದು ಹೇಳುತ್ತಾರೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ. ಹೇ. ಕೇ. ಸ. ಇ

1ನೇ ಅ. ಮು. ಮ. ದಂ. ನ್ಯಾ.